ಮಾರುಕಟ್ಟೆ ವಹಿವಾಟು ನಡೆಯುವುದು ತುಂಬಾ ಕಷ್ಟವಾಗುತ್ತದೆ. ಇಮೊತ್ತು ತುಮಕೂರು ಮತ್ತು ಸಿರಾದಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆ ವಹಿವಾಟು ಸರಿಯಾಗಿ ನಡೆಯದಿರುವುದರಿಂದ ಆ ಭಾಗದ ರೈತರು ತಾವು ಉತ್ಪಾದಿಸಿದಂಥ ರೇಷ್ಮೆಗೂಡುಗಳನ್ನು ರಾಮನಗರ, ಚನ್ನಪಟ್ಟಣ, ಕನಕಪುರ, ಮತ್ತು ಶಿಡ್ಲಘಟ್ಟಕ್ಕೆ ತರುತ್ತಿರುವುದರಿಂದ ತುಮಕೂರು ಮತ್ತು ಚಿತ್ರದುರ್ಗದಲ್ಲಿರುವ ಎರಡೂ ರೇಷ್ಮೆಗೂಡಿನ ಮಾರುಕಟ್ಟೆಗಳನ್ನು ಸ್ವಲ್ಪ ಅಭಿವೃದ್ಧಿಪಡಿಸಿದ ನಂತರ ಅಲ್ಲಿ ರೇಷ್ಮೆ ಬಿತ್ತನೆ ಬಗ್ಗೆ ಚಿಂತನೆ ಮಾಡಬಹುದೇ ಹೊರತು ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ..

ಶ್ರೀ ಟಿ.ಬಿ. ಜಯಚಂದ್ರ : ತುಮಕೂರು ಅಥವಾ ಚಿತ್ರದುರ್ಗದಲ್ಲಿ ನಷ್ಟದಲ್ಲಿ ನಡೆಯುತ್ತಿರುವ ರೇಷ್ಮೆಗೂಡಿನ ಮಾರುಕಟ್ಟೆಗಳನ್ನು ಬೇರರೆಡೆಗೆ ವರ್ಗಾಯಿಸಿದರೆ ಸರ್ಕಾರಕ್ಕೆ ಹಣವೇನೂ ಖರ್ಚಾಗುವುದಿಲ್ಲ. ಇದರ ಬಗ್ಗೆ ವೈಯಕ್ತಿಕವಾಗಿ ತಮಗೆ ಸಾಕಷ್ಟು ಸಲ ಹೇಳಿದ್ದೇನೆ. ತುಮಕೂರಿನಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆಯನ್ನು ವರ್ಗಾಯಿಸುವ ಬಗ್ಗೆ ಸಚಿವರು ಯೋಚನೆ ಮಾಡಬಹುದು.

ಶ್ರೀ ಡಿ. ನಾಗರಾಜಯ್ಯ : ಈಗ ವರ್ಗಾಯಿಸುವ ಪ್ರಶ್ನೆಯಲ್ಲ. ಮಾರುಕಟ್ಟೆಯನ್ನು ಬೇರೆಡೆಗೆ ವರ್ಗಾಯಿಸಬೇಕಾದರೆ ಆ ಮಾರುಕಟ್ಟೆಯ ಸ್ಥಾಪನೆಗೆ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದು, ಮಾರುಕಟ್ಟೆಯ ಕಟ್ಟಡವನ್ನು ಶಿಫ್ಟ್ ಮಾಡಲು ಸಾಧ್ಯವಿಲ್ಲ. ವರ್ಗಾಯಿಸಿದರೂ ಚಿಂತೆಯಿಲ್ಲ ಅಥವಾ ಮಾರುಕಟ್ಟೆಯನ್ನು ಪ್ರಾರಂಭಮಾಡವುದಕ್ಕಾಗುವುದಿಲ್ಲವೆಂದು, ಒಂದು ವೇಳೆ ಮಾರುಕಟ್ಟೆಯ ವಹಿವಾಟು ನಡೆಯಲಿಲ್ಲವೆಂದಾಗಲೂ ಮಾರುಕಟ್ಟೆಯನ್ನು ಪ್ರಾರಂಭಿಸುವುದರಿಂದ ಹಣ ಖರ್ಚಾಗುತ್ತದೆಯೇ ಹೊರತು ಉದ್ದೇಶ ಸಫಲವಾಗುವುದಿಲ್ಲವೆನ್ನುವುದನ್ನು ಗಮನದಲ್ಲಿಟ್ಟುಕೊಂಡು ತಾವು ಇನ್ನು ಮುಂದೆ ರೈತರನ್ನು ಶಿಕ್ಷಿತರನ್ನಾಗಿ ಮಾಡುವುದರ ಮುಖಾಂತರ ಅತಿ ಹೆಚ್ಚು ರೇಷ್ಮೆ ಬೆಳೆ ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ನೀವು ರೇಷ್ಮೆ ಬೆಳೆ ಬೆಳೆಯುವಂಥ ಸಂದರ್ಭದಲ್ಲಿ ಅಲ್ಲಿ ಮಾರುಕಟ್ಟೆ ತೆರೆಯಲು ಸರ್ಕಾರಕ್ಕೆ ಯಾವುದೇ ವಿಧವಾದ ತೊಂದರೆಯಿಲ್ಲ, ಖಂಡಿತವಾಗಿಯೂ ತೆರೆಯುತ್ತೇವೆ. ಆ ಮಟ್ಟಕ್ಕೆ ನೀವು ರೇಷ್ಮೆ ಬೆಳೆಗಾರರನ್ನು ತಯಾರಿಸಿ ರೇಷ್ಮೆ ಬೆಳೆ ಬೆಳೆಯುವಂಥ ವ್ಯವಸ್ಥೆಯನ್ನು ನೀವು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಆಶ್ರಯ ಯೋಜನೆಯಡಿಯಲ್ಲಿ ವಿತರಿಸಲಾದ ಮನೆಗಳು

97 - ಶ್ರೀ ಕುಂಬ್ಳೆ ಸುಂದರರಾವ್ (ಸುರತಕ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ತಾಲ್ಲೂಕುಬಜ್ಪೆ ಪಂಚಾಯತ್ ವ್ಯಾಪ್ತಿಯಲ್ಲಿ ಇದುವರೆವಿಗೂ ಆಶ್ರಯ ಯೋಜನೆಯಡಿ ಕೊಡಲಾದ ಮನೆಗಳೆಷ್ಟು?*

ಆ) *ಅವುಗಳಲ್ಲಿ ಹಣ ಸಂದಾಯವಾದರೂ ಮನೆ ಪೂರ್ತಿಯಾಗದೆ ಉಳಿದಿವೆಯೆಂಬುದು ನಿಜವೇ?*

ಇ) ಇದರಲ್ಲಿ ಅವ್ಯವಹಾರ ನಡೆದಿದ್ದರೆ ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

ಅ) 1993-94 ಹಾಗೂ 1994-95ನೇ ಸಾಲಿನಲ್ಲಿ ಒಟ್ಟು 90 ಆಶ್ರಯ ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದ್ದು ಈ ಪೈಕಿ 71 ಮನೆಗಳು ಪೂರ್ಣವಾಗಿದ್ದು 19 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ.

ಆ) ಇಲ್ಲ.

ಇ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಅವ್ಯವಹಾರ ನಡೆದ ಬಗ್ಗೆ ಈವರೆಗೆ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಬಜ್ಪೆ ಪಂಚಾಯತ್ ವ್ಯಾಪ್ತಿಯಲ್ಲಿ ಇದುವರೆವಿಗೂ 'ಆಶ್ರಯ' ಯೋಜನೆಯಡಿ ಕೊಡಲಾದ ಮನೆಗಳೆಷ್ಟು ಎಂದು ಕೇಳಿರುವ ಮೊದಲನೇ ಪ್ರಶ್ನೆಗೆ ಉತ್ತರವಾಗಿ 1993-94 ಹಾಗೂ 1994-95ನೇ ಸಾಲಿನಲ್ಲಿ ಒಟ್ಟು 90 ಆಶ್ರಯ ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 71 ಮನೆಗಳು ಪೂರ್ಣವಾಗಿದ್ದು 19 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆಯೆಂದು ಹೇಳಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, ಈ ಸರ್ಕಾರ ಅಧಿಕಾರಕ್ಕೆ ಬಂದನಂತರ ಆ ಕ್ಷೇತ್ರದಲ್ಲಿ ಎಷ್ಟಡು ಮನೆಗಳನ್ನು ನೀವು ಒದಗಿಸಿದ್ದೀರಿ? ಇನ್ನು 71 ಮನೆಗಳು ಪೂರ್ಣವಾಗಿದೆಯೆಂದು ನೀವು ಏನು ಹೇಳುತ್ತಿದ್ದೀರಿ, ಪೂರ್ಣವಾದಂಥ ಮನೆಗಳು ಫಲಾನುಭವಿಗಳಿಗೆ ದಕ್ಕಿದೆಯೇ? ಅವುಗಳು ವಾಸಕ್ಕೆ ಯೋಗ್ಯವಾಗಿವೆಯೇ? ಇದನ್ನು ಏಕೆ ಕೇಳುತ್ತಿದ್ದೇನೆಂದರೆ, ಅಲ್ಲಿ ನಿರ್ಮಾಣವಾದಂಥ ಮನೆಗಳು ತೀರಾ ಕಳಪೆಯಾಗಿವೆ. ತಾವು ಹಿಂದೊಮ್ಮೆ ಬಿಜಾಪುರಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿ ನಿರ್ಮಾಣವಾಗಿದ್ದು ಮನೆಗಳನ್ನು ಒದ್ದು ನೋಡಿದ್ದಿರಂತೆ. ಹಾಗೆಯೇ ನಮ್ಮ ಕ್ಷೇತ್ರಕ್ಕೂ ಬಂದು ನಿರ್ಮಾಣವಾಗಿರುವ ಮನೆಗಳನ್ನು ಒದ್ದು ನೋಡಿದರೆ ಗೊತ್ತಾಗುತ್ತದೆ! ಬರೀ ಮನೆಗೆ ಮಾತ್ರ ಒದ್ದರೆ ಸಾಲದು, ಅಲ್ಲಿ ಹಾಕಿರುವ ಪಕ್ಕಾಸ್ (ತೊಲೆ) ಏನಿದೆ, ಅದಕ್ಕೆ ಒದೆಯಿರಿ, ಅದು ತುಂಡಾಗಲಿಲ್ಲವೆಂದರೆ ನನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತೇನೆ. ಇಂತಹ ಪರಿಸ್ಥಿತಿಯಲ್ಲಿ ಆ ಮನೆಗಳಿವೆ. ಆದುದರಿಂದ, ಈ ವಿಷಯವಾಗಿ ಸ್ವಲ್ಪ ವಿವರಣೆ ಬೇಕಾಗುತ್ತದೆ. ಒಂದು ವೇಳೆ ಇಂತಹ ಅಕ್ರಮ ಮಾಡಿ ಫಲಾನುಭವಿಗಳಿಗೆ ಸಿಗಬೇಕಾದಂಥ ಮನೆಗಳನ್ನು ಕಳಪೆಗೊಳಿಸಿ ಅದು ಸಿಕ್ಕರೂ ಸಿಗದಂತೆ ಮಾಡುವ ಅಧಿಕಾರಿಗಳು ಯಾರಿದ್ದಾರೆ, ಗುತ್ತಿಗೆದಾರರು ಯಾರಿದ್ದಾರೆ, ಅವರ ಮೇಲೆ ಕೈಗೊಳ್ಳುವ ಕ್ರಮಗಳೇನು? ಎಂಬುದನ್ನು ತಿಳಿಸಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಉತ್ತರದಲ್ಲಿಯೇ ಸ್ಪಷ್ಟಪಡಿಸಿದ್ದೇನೆ. ಮಂಗಳೂರು ತಾಲ್ಲೂಕಿನ ಬಜ್ಪೆ ಪಂಚಾಯಿತಿ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಯಡಿ ಮನೆಗಳ ನಿರ್ಮಾಣ ಕೈಗೆತ್ತಿ ಕೊಂಡಿದ್ದುದು 1993-94 ಮತ್ತು 1994-95ನೇ ಸಾಲಿನಲ್ಲಿ. ಸದರಿ ಸಾಲುಗಳಲ್ಲಿ ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಗುತ್ತಿಗೆದಾರರಿಗೆ ಹಿಂದಿನ ಸರ್ಕಾರ ಕೊಟ್ಟಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆಶ್ರಯ ಯೋಜನೆಯಡಿ ಅಲ್ಲಿ ಮನೆಗಳನ್ನು ನಿರ್ಮಿಸಲು

ಯಾವುದೇ ಗುತ್ತಿಗೆಯನ್ನೂ ಕೊಟ್ಟಿಲ್ಲ. ನಾವು ಕಾನೂನುಗಳನ್ನು ಬದಲಾವಣೆ ಮಾಡಿದ್ದೇವೆ. ಹಿಂದಿನ ಸರ್ಕಾರ ಮನೆಗಳನ್ನು ನಿರ್ಮಿಸಲು ಗುತ್ತಿಗೆದಾರರು ವಹಿಸಿಕೊಟ್ಟಿದ್ದರಿಂದ 90 ಮನೆಗಳ ಪೈಕಿ 71 ಮನೆಗಳು ಪೂರ್ಣವಾಗಿ ನಿರ್ಮಾಣವಾಗಿವೆಯೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ತಾವು ಮಾತನಾಡುತ್ತಾ ಈ ಮನೆಗಳ ನಿರ್ಮಾಣದ ಕಾಮಗಾರಿ ಸರಿಯಾಗಿಲ್ಲವೆಂದು ನನ್ನ ಗಮನಕ್ಕೆ ತಂದಿದ್ದೀರಿ. ಸರ್ಕಾರಕ್ಕೆ ಬಂದಿರುವ ವರದಿ ಪ್ರಕಾರ ಅಲ್ಲಿ ಮನೆಗಳ ನಿರ್ಮಾಣ ಕೆಲಸ ಸರಿಯಾಗಿ ನಡೆದಿದೆ. ಈ ವಿಚಾರದಲ್ಲಿ ನಾನು ನಿಮ್ಮನ್ನು ನಂಬುತ್ತೇನೆ. ಮನೆಗಳ ನಿರ್ಮಾಣ ವಿಚಾರದಲ್ಲಿ ಆ ತರಹ ಕಾಮಗಾರಿಗಳು ಸರಿಯಾಗಿರದೇ ಇದ್ದರೆ ಸಂಬಂಧಪಟ್ಟ ಗುತ್ತಿಗೆದಾರರ ಮತ್ತು ಅಧಿಕಾರಿಗಳ ಮೇಲೆ ಖಂಡಿತವಾಗಿಯೂ ಕ್ರಮ ಜರುಗಿಸುತ್ತೇನೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ಉಪ ಪ್ರಶ್ನೆ ಕೇಳುತ್ತಾ, ಹೊಸ ಸರ್ಕಾರ ಬಂದ ನಂತರ ಅಲ್ಲಿ ಮನೆಗಳ ನಿರ್ಮಾಣ ಕೆಲಸವೇನಾದರೂ ತೆಗೆದುಕೊಂಡಿದ್ದೀರಾ ಎಂದು ಹೇಳಿದರು. ಮನೆಗಳನ್ನು ಮಂಜೂರಾತಿ ಮಾಡುವಂಥ ಅಧಿಕಾರ ಈಗ ಸರ್ಕಾರಕ್ಕಿಲ್ಲ. It is left to the Taluka Panchyat according to the Panchayat Raj Act of 1993. ಕಾರಣ, ಅಲ್ಲಿನ ತಾಲ್ಲೂಕು ಪಂಚಾಯಿತಿಯವರು ಅದಕ್ಕೆ ಮಂಜೂರಾತಿ ಕೊಡದಿರುವುದರಿಂದ ನಾವು ಈ ವರ್ಷ ಅಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕಾಗಿಲ್ಲ. ಆದರೆ, ಈ ವರ್ಷ ಏನು ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ, ಇದರಲ್ಲಿ ಗುತ್ತಿಗೆದಾರರಿಲ್ಲದೆ ಫಲಾನುಭವಿಗಳೇ ಸ್ವತಃ ಕಟ್ಟಿಕೊಳ್ಳಬೇಕೆಂದು ನಮ್ಮ ಸರ್ಕಾರದ ಹೊಸ ನಿಯಮವಿದೆ.

ಶ್ರೀ ಕುಂಬಳೆ ಸುಂದರರಾವ್ : ನಾನು ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಪ್ರಶ್ನೆ ಕೇಳಿದ್ದು, ಅದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿ ಬಂದಿದೆ. ಇದರ ಪಕ್ಕದ ಕಾಟಿಪಳ್ಳ ಎಂಬ ಪಂಚಾಯತಿಯಲ್ಲಿ ಸುಮಾರು 17 ಮನೆಗಳು ಪೂರ್ತಿಯಾಗಿಲ್ಲ. ಈ ಕುರಿತು ನಾನು ಕೇಳಿದ ಪ್ರಶ್ನೆ ನಿಮಗೆ ಬಂದಿರಬೇಕು. ಅದರ ಪೈಕಿ ಮೂರು ಮನೆಗಳು ನಾಪತ್ತೆಯಾಗಿವೆ ಅಂದರೆ ಮನೆಗಳು ನಿರ್ಮಾಣವಾಗಲೇ ಇಲ್ಲ. ಇದಕ್ಕೆ ಯಾರು ಕಾರಣರೆಂದು ಬಿ.ಡಿ.ಓ. ಅವರನ್ನು ನಾನು ಪ್ರಶ್ನಿಸಿದಾಗ ಅವರು ಇಂಜಿನಿಯರ್ ಅವರನ್ನು ತೋರಿಸಿ ಅವರು ಕಂಪ್ಲೀಷನ್ ಸರ್ಟಿಫಿಕೇಟ್ ಕೊಟ್ಟರೆಂದು ಹೇಳಿದರು. ಇಂಜಿನಿಯರ್ ಅವರನ್ನು ಕೇಳಿದಾಗ ಅವರು ಗುತ್ತಿಗೆದಾರರನ್ನು ತೋರಿಸಿ, ಗುತ್ತಿಗೆದಾರರನ್ನು ಕೇಳಿದಾಗ ಅವರು ಕಾರ್ಯದರ್ಶಿಯವರನ್ನು ತೋರಿಸುತ್ತಾರೆ. ಬಡಪಾಯಿ ಕಾರ್ಯದರ್ಶಿಯವರಿಗೆ ಸಂಬಳವಿಲ್ಲದಿರುವಂಥ ಸ್ಥಿತಿ ಇದೆ. ಮೇಲಿನ ಅಧಿಕಾರಿಗಳು ಕಲೆಕ್ಟರ್ ಆದವರು ಯಾರಿದ್ದಾರೆ, ಅವರು ಇವರನ್ನು ತೋರಿಸುವುದು, ಇವರು ಅವರನ್ನು ತೋರಿಸುವುದು. ನಾನು ಒಬ್ಬ ಶಾಸಕನಾಗಿ ಅಲ್ಲಿಗೆ ಹೋಗಿ ಕೇಳಿದಾಗ ಎಷ್ಟು ಮನೆಗಳಿವೆಯೆಂದು ಸಮರ್ಪಕವಾಗಿ ಹೇಳಲು ತಯಾರಿಲ್ಲ. ನನಗೇನಾದರೂ ಒಂದು ಕಛೇರಿ ಕೊಡಿಸಿದರೆ ಅಲ್ಲಿ ಕುಳಿತುಕೊಂಡು ಸಂಬಂಧಿಸಿದವರನ್ನು ಕರೆಸುತ್ತಿದ್ದೆ, ಆದರೆ, ನಾನು ಇರುವುದು ಮರದ ಬುಡದಲ್ಲಿ. ಹಾಗಿದೆ, ನಮ್ಮ ಸ್ಥಿತಿ. ಕಾಟಿಪಳ್ಳದಲ್ಲಿ ಲಕ್ಷಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ಇದರ ಬಗ್ಗೆ ನನಗೆ ವಿವರಣೆ ಬೇಕು.

ಶ್ರೀ ಬಸವರಾಜ ರಾಯರೆಡ್ಡಿ : ಇದೇ ತಾಲ್ಲೂಕಿನ ಕಾಟಿಪಳ್ಳ ಎನ್ನುವ ಊರಿನಲ್ಲಿ 1993-94 ಮತ್ತು 94-95ನೇ ಸಾಲಿನಲ್ಲಿ ಸುಮಾರು 37 ಮನೆಗಳನ್ನು ಪ್ರಾರಂಭಿಸಿದ್ದಾರೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಬರಲಿಲ್ಲವೆಂದು ಹಿಂದಿದ್ದಂಥ ಬಿ.ಡಿ.ಓ.ನವರು Task force Committee headed by the legislator, ಅವರು ಏನು ಮಾಡಿದರೆಂದರೆ ಹತ್ತು ರೂಪಾಯಿ ಮೌಲ್ಯದ ಸ್ಟಾಂಪ್ ಪೇಪರ್ ಮೇಲೆ ಬರೆದು ಮನೋಹರ್ ಅಂಚನ್ ಎನ್ನುವ ಒಬ್ಬರಿಗೆ ಗುತ್ತಿಗೆ ಕೊಟ್ಟರು. ಹಣ ಕೂಡ ಬಿಡುಗಡೆ ಮಾಡಿದ್ದು 37 ಮನೆಗಳ ಪೈಕಿ8ಮನೆಗಳನ್ನು ಪೂರ್ತಿಗೊಳಿಸಿದ್ದು, ಉಳಿದ ಮನೆಗಳನ್ನು ಇದುವರೆವಿಗೂ ಪೂರ್ತಿಗೊಳಿಸಿಲ್ಲ. ಈಗಾಗಲೇ ಉಳಿದ ಮನೆಗಳನ್ನು ಪೂರ್ತಿಗೊಳಿಸಲು ಷೋಕಾಸ್ ನೋಟೀಸ್ ಅನ್ನು ಸಂಬಂಧಪಟ್ಟ ಅಧಿಕಾರಿಗಳು ಹೊರಡಿಸಿದ್ದು, ಮತ್ತು ಈ ವಿಷಯದಲ್ಲಿ ಕೆಲವು ಅಧಿಕಾರಿಗಳು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಾರೆಂದು ಹೇಳಿದಿರಿ. ಇದರ ಬಗ್ಗೆ ಈಗಾಗಲೇ ನಾವು ಇಲಾಖಾ ವಿಚಾರಣೆಗೆ ಆಜ್ಞೆ ಮಾಡಿದದು, ಪ್ರಾಥಮಿಕ ವಿಚಾರಣೆ ಪ್ರಾರಂಭವಾಗಿದ್ದು, ಸದರಿ ವಿಚಾರಣೆಯಲ್ಲಿ ಇಂದಿನಬೀಡು, ಇಬ್ರಾಹಿಂ ಗುಡನೆಡ, ಆನಂದ ಹೆಗ್ಗಡೆ, ನಿವೃತ್ತ ಮುಖ್ಯಾಧಿಕಾರಿ, ರಘುವೀರ್, ಪ್ರಭಾರ ಕಾರ್ಯದರ್ಶಿ, ಬಾಳ ಪಂಚಾಯಿತಿ, ನಿಂಗಪ್ಪ, ಕಿರಿಯ ಇಂಜಿನಿಯರ್, ನೀಲಯ್ಯ, ಕಿರಿಯ ಇಂಜಿನಿಯರ್, ಇವರುಗಳ ಮೇಲೆ ವಿಚಾರಣೆ ಪ್ರಾರಂಭವಾಗಿದೆ. ವಿಚಾರಣೆ ಪೂರ್ತಿಯಾಗಿ ಮುಗಿದ ನಂತರ, ಅದರ ವರದಿಯ ಆಧಾರದ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇನೆ ಮತ್ತು ಉಳಿದಿರುವ ಮನೆಗಳನ್ನು ಪೂರ್ತಿಗೊಳಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕುಂಬಳೆ ಸುಂದರರಾವ್ : ಕಾನೂನು ಕ್ರಮ ಏನು ತೆಗೆದುಕೊಳ್ಳುತ್ತೀರೋ ಅದರಷ್ಟಕ್ಕೆ ಅದು ನಡೆಯುತ್ತದೆ. ಆದರೆ, ಫಾಲನುಭವಿಗಳು ಯಾರಿದ್ದಾರೋ ಅವರಿಗೆ ಮನೆಗಳು ಸಿಗುವ ಬಗೆ ಹೇಗೆ? ಅವರುಗಳು ದಿನಿತ್ಯವೂ ನನ್ನನ್ನು ಬಂದು ಕಾಡುತ್ತಿದ್ದಾರೆ. ಮನೆಗಳನ್ನು ಪೂರ್ತಿಗೊಳಿಸಿ ಏನು ಮಾಡುತ್ತೀರಿ? ಆ ಕುರಿತ ಹಣ ಸರ್ಕಾರಕ್ಕೆ ಪೂರ್ತಿಯಾಗಿ ಸಂದಾಯವಾಗಿದೆಯಲ್ಲಾ, ಯಾವ ಆಧಾರದ ಮೇಲೆ ಹಣ ಸಂದಾಯವಾಗಿದೆಯೋ ಅದರಂತೆ ಅದರ ಫಲ ಪಡೆಯುವುದಕ್ಕೆ ಜನರು ಇಲ್ಲವೆಂದರೇನು? ಅದು ಜನರಿಗೆ ಉಪಯೋಗವಿಲ್ಲವೆಂದರೆ ಸ್ಥಿತಿ ಏನಾಗಬೇಡ?

ಶ್ರೀ ಬಸವರಾಜ ರಾಯರೆಡ್ಡಿ : ಹಿಂದೆ ಟಾಸ್ಕ್‌ಫೋರ್ಸ್ ಕಮಿಟಿಯನ್ನು ರಚಿಸಿದ್ದಾಗ ಅವರು ಹತ್ತು ರೂಪಾಯಿಯ ಸ್ಟಾಂಪ್ ಪೇಪರ್ ಮೇಲೆ ಬರೆದು ಮನೋಹರ್ ಅಂಚನ್ ಎನ್ನುವ ಒಬ್ಬ ಗುತ್ತಿಗೆದಾರರ ಮನೆಗಳನ್ನು ನಿರ್ಮಿಸುವ ಕಾರ್ಯ ವಹಿಸಿದ್ದು, ಅವರಿಗೆ ಹಣ ಬಿಡುಗಡೆ ಮಾಡಿದ್ದರೂ ಸಹ ಆತ ಮನೆಗಳನ್ನು ಪೂರ್ತಿಗೊಳಿಸಿಲ್ಲ. ಈ ಹಿನ್ನೆಲೆಯಲ್ಲಿ ಮನೆಗಳನ್ನು ಪೂರ್ತಿಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳ ಮೂಲಕ ಷೋಕಾಶ್ ನೋಟಿಸ್ ಕೊಟ್ಟಿದ್ದು, ಮನೆಗಳನ್ನು ಪೂರ್ತಿಗೊಳಿಸಲು ಸಾಧ್ಯವಾಗದಿದ್ದರೆ ಹಣ ವಾಪಸ್ಸು ಮಾಡಬೇಕೆಂದು ಹೇಳಿದ್ದೇವೆ. ಇದರ ಬಗ್ಗೆ ವಿಚಾರಣೆ ಪ್ರಾರಂಭವಾಗಿರುವುದರಿಂದ, ಆ ಕುರಿತು ಸರಿಪಡಿಸಿಕೊಡುತ್ತೇವೆ.